## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2017–18 ನೇ ಸಾಲಿನ ಆರ್ಥಿಕ ವರ್ಷದಲ್ಲಿ ಪ್ರಧಾನ ಲೆ.ಶೀ.2405–00–101–0–58–ನೀಲಿ ಕ್ರಾಂತಿ/ಮೀನುಗಾರಿಕೆಯ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ–106–ಸಹಾಯಧನ ಅಡಿ ಹೆಚ್ಚುವರಿ ಅನುದಾನ ಕೋರಿರುವ ಬಗ್ಗೆ.

**ಓದಲಾಗಿದೆ:** ಕಡತ ಸಂಖ್ಯೆ: ಪಸಂಮೀ 166 ಮೀಇಯೋ 2017.

*****

**ಪ್ರಸ್ತಾವನೆ:**

ಮೇಲೆ ಓದಲಾದ ಕಡತದಲ್ಲಿ 2017–18ನೇ ಸಾಲಿಗೆ ಕೇಂದ್ರ ಪುರಸ್ಕೃತ ನೀಲಿಕ್ರಾಂತಿ/ಮೀನುಗಾರಿಕೆಯ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ ಯೋಜನೆಗೆ ಲೆ.ಶೀ.2405–00–101–0–58–106 ರಡಿಯಲ್ಲಿ ಒಟ್ಟು ರೂ.330.00 ಲಕ್ಷಗಳನ್ನು ಹೆಚ್ಚುವರಿಯಾಗಿ ಬಿಡುಗಡೆ ಮಾಡಲು ಕೋರಲಾಗಿರುತ್ತದೆ. ಪ್ರಸ್ತಾವನೆಯನ್ನು ಪರಿಶೀಲಿಸಿ, ಕೇಂದ್ರ ಸರ್ಕಾರವು ನೀಲಿಕ್ರಾಂತಿ ಯೋಜನೆಗೆ ಮೊದಲನೇ ಕಂತಾಗಿ ರೂ.123.94 ಲಕ್ಷಗಳನ್ನು ಮಾತ್ರ ಬಿಡುಗಡೆ ಮಾಡಿರುವುದರಿಂದ, ಇದಕ್ಕನುಗುಣವಾಗಿ ರಾಜ್ಯದ ಪಾಲಿನ ರೂ.82.62 ಲಕ್ಷಗಳು ಸೇರಿ ಒಟ್ಟು ರೂ.206.56 ಲಕ್ಷಗಳನ್ನು ಬಿಡುಗಡೆ ಮಾಡಬೇಕಾಗಿದ್ದು, ಪ್ರಸ್ತುತ ಆಯವ್ಯಯದಲ್ಲಿ ಲಭ್ಯವಿರುವ ರೂ.204.90 ಲಕ್ಷಗಳ ಅನುದಾನವನ್ನು ಹೊರತುಪಡಿಸಿ, ಬಿಡುಗಡೆ ಮಾಡಲು ಕೊರತೆ ಉಂಟಾಗಿರುವ ರೂ.1.67 ಲಕ್ಷಗಳನ್ನು ಹೆಚ್ಚುವರಿಯಾಗಿ ಬಿಡುಗಡೆ ಮಾಡಲು ನಿರ್ಣಯಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: *FD 187 BRS 2017*, ಬೆಂಗಳೂರು,**

**ದಿನಾಂಕ: *07-FEB-2018***

17 FEB 2018

2017–18ನೇ ಸಾಲಿಗೆ ಕೇಂದ್ರ ಪುರಸ್ಕೃತ ನೀಲಿಕ್ರಾಂತಿ/ಮೀನುಗಾರಿಕೆಯ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ ಯೋಜನೆಗೆ ಕೇಂದ್ರದಿಂದ ಬಿಡುಗಡೆಯಾದ ಅನುದಾನಕ್ಕನುಗುಣವಾಗಿ ರಾಜ್ಯದ ಪಾಲಿನ ಅನುದಾನ ಸೇರಿಸಿ ಬಿಡುಗಡೆ ಮಾಡಲು ಕೊರತೆ ಉಂಟಾಗಿರುವ ರೂ.1.67 ಲಕ್ಷಗಳನ್ನು (ಒಂದು ಲಕ್ಷದ ಅರವತ್ತೇಳು ಸಾವಿರ ರೂಪಾಯಿಗಳು ಮಾತ್ರ) **ಲೆ.ಶೀ.2405–00–101–0–58–ನೀಲಿ ಕ್ರಾಂತಿ/ಮೀನುಗಾರಿಕೆಯ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ–106–ಸಹಾಯಧನ** ರಡಿ ಇದರೊಂದಿಗೆ ಲಗತ್ತಿಸಿದ ಅನುಬಂಧದಂತೆ ಹೆಚ್ಚುವರಿಯಾಗಿ ಮಂಜೂರು ಮಾಡಿದೆ.

ಈ ಹೆಚ್ಚುವರಿ ಅನುದಾನವನ್ನು 2017–18ನೇ ಸಾಲಿನ ಪೂರಕ ಅಂದಾಜುಗಳು **3**ನೇ ಕಂತಿನಲ್ಲಿ ಒದಗಿಸುವ ಮೂಲಕ ಕ್ರಮಬದ್ಧಗೊಳಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

7/2/18

**(ಹೆಚ್.ಎ. ಶೋಭ)**
ಸರ್ಕಾರದ ಅಧೀನ ಕಾರ್ಯದರ್ಶಿ (ಎಫ್‌ಆರ್ ಮತ್ತು ಬಿಸಿಸಿ)
ಆರ್ಥಿಕ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು (ಎ&ಇ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
3. ನಿರ್ದೇಶಕರು, ಮೀನುಗಾರಿಕೆ ಇಲಾಖೆ, ವಿ.ವಿ.ಟವರ್, ಬೆಂಗಳೂರು.
4. ಉಪನಿರ್ದೇಶಕರು, ಟಿ.ಎನ್.ಎಂ.ಸಿ. ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
5. ಖಜಾನಾಧಿಕಾರಿ, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ–4), ಆರ್ಥಿಕ ಇಲಾಖೆ.
7. ರಕ್ಷಾ ಕಡತ.

ಅನುಬಂಧ

ಆದೇಶ ಸಂಖ್ಯೆ: **FD 187 BRS 2017** , ದಿನಾಂಕ: **07-FEB-18**

(ರೂ, ಲಕ್ಷಗಳಲ್ಲಿ)

| ಬೇಡಿಕೆ ಸಂಖ್ಯೆ | ಲೆಕ್ಕ ಶೀರ್ಷಿಕೆ | | | ಮೂಲ ಅಂದಾಜು | 2017-18 SE1 | SE2 | SE3 | ಅನುಮೋದಿತ ಹೆಚ್ಚುವರಿ | ಒಟ್ಟು |
|---|---|---|---|---|---|---|---|---|---|
| 02-AH & F | EXP-04 | | | | | | | | |
| 1 2405-00-101-0-58 | ನೀಲಿ ಕ್ರಾಂತಿ / ಮೀನುಗಾರಿಕೆಯ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ | 106 ಸಹಾಯಧನ | V | 1152.00 | 0.00 | 0.00 | 0.00 | 1.67 | 1153.67 |
| | | ಒಟ್ಟು 2405-00-101-0-58 : | | **1152.00** | **0.00** | **0.00** | **0.00** | **1.67** | **1153.67** |
| | | | ಒಟ್ಟು: | **1152.00** | **0.00** | **0.00** | **0.00** | **1.67** | **1153.67** |

(ಹೆಚ್.ಎ. ಶೋಭ)
ಸರ್ಕಾರದ ಅಧೀನ ಕಾರ್ಯದರ್ಶಿ (ಎಫ್ಆರ್ ಮತ್ತು ಬಿಸಿಸಿ)
ಆರ್ಥಿಕ ಇಲಾಖೆ.